ಕರ್ನಾಟಕ ಸರ್ಕಾರ

ಕ್ರಮಾಂಕ: ಇಡಿ 01 ಯುಡಿಎಸ್ 2018

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ 07.07.2020

12 AUG 2020
208

ಇಂದ
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ),
ಬೆಂಗಳೂರು - 560 001.

MANGALORE UNIVERSITY
ಮಂಗಳೂರು ವಿಶ್ವವಿದ್ಯಾನಿಲಯ
Registrar's Office
23 JUL 2020
Regn.No: 1472

ಇವರಿಗೆ
ಕುಲಸಚಿವರು,
ಮಂಗಳೂರು ವಿಶ್ವವಿದ್ಯಾಲಯ,
ಮಂಗಳೂರು.

ಮಾನ್ಯರೆ,

ವಿಷಯ:- ಮಂಗಳೂರು ವಿಶ್ವವಿದ್ಯಾಲಯದ ದೂರ ಶಿಕ್ಷಣ ಕೇಂದ್ರದ ಮುಖಾಂತರ ನಡೆಸಲಾಗುವ ಸ್ನಾತಕ ಮತ್ತು ಸ್ನಾತಕೋತ್ತರ ಕಾರ್ಯಕ್ರಮಗಳನ್ನು ನಿಯಂತ್ರಿಸುವ ವಿನಿಯಮದ ಬಗ್ಗೆ.

ಉಲ್ಲೇಖ:-
1) ತಮ್ಮ ಪತ್ರ ಸಂಖ್ಯೆ: ಮವಿ/ಶೈಕ್ಷಣಿಕ/ಸಿಆರ್51/ರೆಗ್ಯು(ದೂರ ಶಿಕ್ಷಣ)/2017-18/ಎ2, ದಿನಾಂಕ 17.06.2020.
2) ಇದೇ ಸಮಸಂಖ್ಯೆಯ ಸರ್ಕಾರದ ಪತ್ರ ದಿನಾಂಕ 24.01.2020.

---

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಂಗಳೂರು ವಿಶ್ವವಿದ್ಯಾಲಯದ ದೂರ ಶಿಕ್ಷಣ ಕೇಂದ್ರದ ಮುಖಾಂತರ ನಡೆಸಲಾಗುವ ಸ್ನಾತಕ ಮತ್ತು ಸ್ನಾತಕೋತ್ತರ ಕಾರ್ಯಕ್ರಮಗಳನ್ನು ನಿಯಂತ್ರಿಸುವ ಕರಡು ವಿನಿಯಮಗಳಿಗೆ ಅನುಮೋದನೆ ನೀಡುವಂತೆ ಕೋರಿ ಉಲ್ಲೇಖ (1)ರ ಪತ್ರದಲ್ಲಿ ಸರ್ಕಾರಕ್ಕೆ ಸಲ್ಲಿಸಲಾಗಿರುವ ಪ್ರಸ್ತಾವನೆಯನ್ನು ಪರಿಶೀಲಿಸಲಾಯಿತು.

ಪ್ರಸ್ತಾಪಿತ ವಿಷಯಕ್ಕೆ ಸಂಬಂಧಿಸಿದಂತೆ ಈಗಾಗಲೇ ಉಲ್ಲೇಖ(2)ರ ಪತ್ರದಲ್ಲಿ ದೂರ ಶಿಕ್ಷಣ ಕಾರ್ಯಕ್ರಮಗಳನ್ನು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮೈಸೂರು ವತಿಯಿಂದ ನಡೆಸಲಾಗುತ್ತಿರುವ ಹಿನ್ನೆಲೆಯಲ್ಲಿ ಬೇರೆ ವಿಶ್ವವಿದ್ಯಾಲಯಗಳಲ್ಲಿ ದೂರಶಿಕ್ಷಣ ಕಾರ್ಯಕ್ರಮವನ್ನು ನಿರ್ವಹಿಸುವ ಅವಶ್ಯಕತೆ ಇಲ್ಲದಿರುವುದರಿಂದ ಕರಡು ವಿನಿಯಮಗಳನ್ನು ಪರಿಗಣಿಸಲು ಸಾಧ್ಯವಿಲ್ಲವೆಂದು ನಿರ್ದೇಶನ ನೀಡಲಾಗಿರುತ್ತದೆ. ಅಲ್ಲದೆ **ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳು ಮತ್ತು ಕೆಲವು ಇತರ ಕಾನೂನು(ತಿದ್ದುಪಡಿ) ಅಧ್ಯಾದೇಶ 2020ರಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯವನ್ನು ಹೊರತುಪಡಿಸಿ ಯಾವುದೇ ವಿಶ್ವವಿದ್ಯಾನಿಲಯವು ವಿಶ್ವವಿದ್ಯಾನಿಲಯದ ಪ್ರದೇಶದೊಳಗೆ ಅಥವಾ ಹೊರಗೆ ಮುಕ್ತ ಮತ್ತು ದೂರಶಿಕ್ಷಣ ವಿಧಾನದಲ್ಲಿ ಯಾವುದೇ ಕಾರ್ಯಕ್ರಮವನ್ನು ನೀಡತಕ್ಕದ್ದಲ್ಲವೆಂದು** ವ್ಯಾಖ್ಯಾನಿಸಲಾಗಿರುತ್ತದೆ (ಪ್ರತಿ ಲಗತ್ತಿಸಿದೆ). ಆದುದರಿಂದ ಸರ್ಕಾರದ ದಿನಾಂಕ 24.01.2020ರ ಪತ್ರದಲ್ಲಿನ ಸೂಚನೆಯನ್ವಯವೇ ಕ್ರಮವಹಿಸುವಂತೆ ಮತ್ತೊಮ್ಮೆ ತಮಗೆ ತಿಳಿಸಲು ನಾನು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ

(ಮಹೇಶ್.ಆರ್)
ಸರ್ಕಾರದ ಅಧೀನ ಕಾರ್ಯದರ್ಶಿ
ಉನ್ನತ ಶಿಕ್ಷಣ ಇಲಾಖೆ(ವಿಶ್ವವಿದ್ಯಾಲಯ-2)

## ಹಿಂಬರಹ

ಸಂ: ಮಂವಿ/ಶೈಕ್ಷಣಿಕ/ಸಂ೫೫51/ಹಿ.ಸಿ.೮(ಎಲ್)/2017-18/೫೭ 13.08.2020

ವರದಿಯ ಪತ್ರವನ್ನು (ಕಂಡ್ಯ 2B 01 ಮಾರ್ಚ್ 2018 ದಿ. 07.07.2020) ನಿರ್ದೇಶಕರು, ಹಿಂದಿ ಶಿಕ್ಷಣ ಕೇಂದ್ರ, ಮಂಗಳೂರು ಇವರಿಗೆ ಮಾಹಿತಿಗಾಗಿ ಕಳುಹಿಸಲಾಗಿದೆ.

Prasible

ಕುಲಸಚಿವರ ಪರವಾಗಿ
ಮಂಗಳೂರು ವಿಶ್ವವಿದ್ಯಾನಿಲಯ
ಮಂಗಳಗಂಗೋತ್ರಿ - 574 199 ದ. ಕ.

ಗೆ,

ನಿರ್ದೇಶಕರು
ಹಿಂದಿ ಶಿಕ್ಷಣ ಕೇಂದ್ರ
ಮಂಗಳೂರು ವಿಶ್ವವಿದ್ಯಾನಿಲಯ.